# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 545(669) |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.02.2023 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ತುಮಕೂರು, ಕಲಬುರ್ಗಿ, ಮಂಗಳೂರು, ಶಿವಮೊಗ್ಗ, ವಿಜಯಪುರ, ಬೆಳಗಾವಿ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಎಷ್ಟು ಬಡಾವಣೆಗಳನ್ನು ನಿರ್ಮಿಸಿ, ಎಷ್ಟು ನಿವೇಶನಗಳನ್ನು ಮತ್ತು ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಹಂಚಿಕೆಯಾಗದೆ ಉಳಿದ ನಿವೇಶನಗಳು ಎಷ್ಟು (ಪ್ರಾಧಿಕಾರವಾರು ಕಳೆದ ಮೂರು ವರ್ಷಗಳ ವಿವರ ನೀಡುವುದು). | ಕಳೆದ ಮೂರು ವರ್ಷಗಳಲ್ಲಿ ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ತುಮಕೂರು, ಕಲಬುರ್ಗಿ, ಮಂಗಳೂರು, ಶಿವಮೊಗ್ಗ, ವಿಜಯಪುರ, ಬೆಳಗಾವಿ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿರುವ, ಹಂಚಿಕೆಯಾಗದೆ ಉಳಿದ ನಿವೇಶನಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಹಂಚಿಕೆ ಮಾಡಲು ಇರುವ ಮಾನದಂಡಗಳೇನು; ಮತ್ತು ಹಂಚಿಕೆಯನ್ನು ಯಾವ ವಿಧಾನದಲ್ಲಿ ಮಾಡಲಾಗಿದೆ; | ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳನ್ನು ಈ ಕೆಳಕಂಡ ನಿಯಮಗಳಂತೆ ಸಾರ್ವಜನಿಕರಿಂದ ನಿವೇಶನ ಹಂಚಿಕೆಗೆ ಅರ್ಜಿ ಆಹ್ವಾನಿಸಿ ನಿಯಮಾನುಸಾರ ಹಂಚಿಕೆ ಮಾಡಲಾಗುತ್ತದೆ.<br><br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರಿಕ ಸೌಲಭ್ಯಗಳನ್ನೊಳಗೊಂಡ ನಿವೇಶನಗಳ ಹಂಚಿಕೆ) ನಿಯಮಗಳು 1991<br><br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲ ನಿವೇಶನಗಳು ಹಾಗೂ ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮಗಳು, 1991<br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ ನಿಯಮಗಳು) 1991 |

| | | |
|---|---|---|
| ಇ) | ಕಳೆದ ಮೂರು ವರ್ಷಗಳಲ್ಲಿ ಆನ್ ಲೈನ್ ಮತ್ತು ಆಫ್ ಲೈನ್ ಮುಖಾಂತರ ಹಂಚಿಕೆ ಮಾಡಲಾದ ನಿವೇಶನಗಳೆಷ್ಟು; ಆಫ್ ಲೈನ್ ಮುಖಾಂತರ ಹಂಚಿಕೆ ಮಾಡುವುದು ಸಮಂಜಸವಲ್ಲದಿದ್ದರೂ ಸಹ ಆಫ್ ಲೈನ್ ಮುಖಾಂತರ ಹಂಚಿಕೆ ಮಾಡಲು ಏನು ಕಾರಣ, ಅನಿವಾರ್ಯತೆಯೇನು; (ಪ್ರಾಧಿಕಾರವಾರು ಸಂಪೂರ್ಣ ಮಾಹಿತಿ ನೀಡುವುದು). | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಈಗಾಗಲೇ ಅಭಿವೃದ್ಧಿಪಡಿಸಿ ವಿವಿಧ ಯೋಜನೆಗಳಲ್ಲಿನ ಮೂಲೆ ಮತ್ತು ಬಿಡಿ ನಿವೇಶನಗಳನ್ನು ಆನ್ ಲೈನ್ ಮುಖಾಂತರ ಒಟ್ಟು 426 ನಿವೇಶನಗಳನ್ನು ಮತ್ತು ಆಫ್ ಲೈನ್ ಮುಖಾಂತರ ಒಟ್ಟು 111 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ನಅಇ 52 ಬೆಮಪ್ರಾ 2020, ದಿನಾಂಕ:24.08.2020 ರಲ್ಲಿ ತಿಳಿಸಿದ ಮಾನದಂಡಗಳ ಪ್ರಕಾರ ಮ್ಯಾನುವಲ್ ಹರಾಜು ಮಾಡಲಾಗಿರುತ್ತದೆ. |
| ಈ | ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಡಿಯಲ್ಲಿ ಯಾವ ಯಾವ ನಗರಗಳಲ್ಲಿ ಕಾಮಗಾರಿ ನಡೆಯುತ್ತಿವೆ; ಕಾಮಗಾರಿ ಯಾವ ಹಂತದಲ್ಲಿದೆ; ಮತ್ತು ಪೂರ್ಣಗೊಳ್ಳುವುದು ಯಾವಾಗ; (ನಗರವಾರು ವಿವರ ನೀಡುವುದು). | ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಡಿಯಲ್ಲಿ ರಾಜ್ಯದ 07 ನಗರಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ಮತ್ತು ತುಮಕೂರು ಹಾಗೂ ಬೆಂಗಳೂರು ನಗರಗಳು ಆಯ್ಕೆಯಾಗಿದ್ದು, ಸದರಿ ನಗರಗಳಲ್ಲಿ 651 ಕಾಮಗಾರಿಗಳ ಪೈಕಿ 522 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 127 ಕಾಮಗಾರಿಗಳು ಪ್ರಗತಿಯಲ್ಲಿರುವ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ. |
| ಉ | ಸ್ಮಾರ್ಟ್ ಸಿಟಿ ಮಿಷನ್ ಯೋಜನೆಗೆ ಇದುವರೆಗೂ ಕೇಂದ್ರ ಸರ್ಕಾರ ನೀಡಿರುವ ಅನುದಾನವೆಷ್ಟು; ಮತ್ತು ರಾಜ್ಯ ಸರ್ಕಾರವು ತನ್ನ ಪಾಲಿನಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; (ವಿವರ ನೀಡುವುದು). | ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಡಿ ರಾಜ್ಯದ 007 ನಗರಗಳಲ್ಲಿ ಕೇಂದ್ರ ಸರ್ಕಾರದಿಂದ . ಬಿಡುಗಡೆಗೊಳಿಸಿರುವ ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿರಿಸಿದೆ. |

ಸಂಖ್ಯೆ: ನಅಇ 07 ಎಲ್‌ಸಿಕ್ಯೂ 2023(ಇ-ಕಡತ)

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

# ಅನುಬಂಧ-1

<table>
<tr><th>ಕ್ರ.ಸಂ.</th><th>ನಗರಾಭಿವೃದ್ಧಿ ಪ್ರಾಧಿಕಾರಗಳು</th><th>ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ತುಮಕೂರು, ಕಲಬುರ್ಗಿ, ಮಂಗಳೂರು, ಶಿವಮೊಗ್ಗ, ವಿಜಯಪುರ, ಬೆಳಗಾವಿ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಮತ್ತು ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗಿರುವ ಹಂಚಿಕೆಯಾಗದೆ ಉಳಿದ ನಿವೇಶನಗಳ ವಿವರಗಳು (ಪ್ರಾಧಿಕಾರವಾರು ಕಳೆದ ಮೂರು ವರ್ಷಗಳ ವಿವರಗಳ ಪಟ್ಟಿ).</th></tr>
<tr><td>01</td><td>ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ</td><td>ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ.</td></tr>
<tr><td>02</td><td>ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ</td><td>ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ.</td></tr>
<tr><td>03</td><td>ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ</td><td>ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ.</td></tr>
<tr><td>04</td><td>ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ</td><td>ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ.</td></tr>
<tr><td>05</td><td>ಕಲಬುರ್ಗಿ ನಗರಾಭಿವೃದ್ಧಿ ಪ್ರಾಧಿಕಾರ</td><td>ಕಳೆದ 03 ವರ್ಷಗಳಲ್ಲಿ ಬಡಾವಣೆಗಳನ್ನು ನಿರ್ಮಿಸಿ ಈ ಕೆಳಕಂಡ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
<table>
<tr><th>2019-20</th><th>2020-21</th><th>2021-22</th></tr>
<tr><td>ಯಾವುದು ಇಲ್ಲ.</td><td>2020-21 ರಲ್ಲಿ ಕುಸನೂರು ವಸತಿ ಬಡಾವಣೆ ನಿರ್ಮಿಸಲಾಗಿರುತ್ತದೆ ಮತ್ತು ಸದರಿ ಬಡಾವಣೆಯಲ್ಲಿ ವಿವಿಧ ಅಳತೆಯ 990 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಉಳಿದ 476 ನಿವೇಶನಗಳನ್ನು ಹರಾಜು ಮೂಲಕ ಕೂಡಲೇ ವಿಲೇ ಮಾಡಲಾಗುವುದು ಮತ್ತು 06 ಸಿ.ಎ. ನಿವೇಶನಗಳಿದ್ದು, ಇವುಗಳನ್ನು ಹಂಚಿಕೆಗಾಗಿ ಕೋರಿ ಅರ್ಜಿ.ಸ್ವೀಕೃತವಾದಲ್ಲಿ ಕೂಡಲೇ ಹಂಚಿಕೆ ಮಾಡಲಾಗುವುದು.</td><td>ಯಾವುದು ಇಲ್ಲ.</td></tr>
</table></td></tr>
</table>

| | | |
|---|---|---|
| 06 | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ | ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ. |
| 07 | ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ | ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ. |
| 08 | ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ | ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ. |
| 09 | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ | ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ. |
| 10 | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ | ಯಾವುದೇ ಬಡಾವಣೆ ರಚನೆಯಾಗಿರುವುದಿಲ್ಲ. |

## ಅನುಬಂಧ-೩

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ | ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಡಿಯಲ್ಲಿ ರಾಜ್ಯದ 7 ನಗರಗಳಲ್ಲಿ ಕಾಮಗಾರಿ ನಡೆಯುತ್ತಿವೆ; ಕಾಮಗಾರಿ ಯಾವ ಹಂತದಲ್ಲಿದೆ; ಮತ್ತು ಪೂರ್ಣಗೊಳ್ಳುವುದು ಯಾವಾಗ; (ನಗರವಾರು ವಿವರಗಳು). | • ಸ್ಮಾರ್ಟ್ ಸಿಟಿ ಯೋಜನೆಯಡಿ ಪ್ರಸ್ತುತ ರಾಜ್ಯದ 7 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು, ಹಾಗೂ ಬೆಂಗಳೂರು ನಗರಗಳು ಆಯ್ಕೆಯಾಗಿದ್ದು, 651 ಕಾಮಗಾರಿಗಳ ಪೈಕಿ 522 ಕಾಮಗಾರಿಗಳು ಪೂರ್ಣಗೊಂಡಿದೆ. ಉಳಿದ 127 ಕಾಮಗಾರಿಗಳು ಪ್ರಗತಿಯಲ್ಲಿವೆ.<br>• ಸ್ಮಾರ್ಟ್ ಸಿಟಿ ಅನುದಾನ ಹಾಗೂ ಪಿಪಿಪಿ ಮಾದರಿಯಡಿ ರಾಜ್ಯದ 7 ನಗರಗಳಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಪ್ರಸ್ತುತ ಪ್ರಗತಿಯ ವಿವರ ಈ ಕೆಳಕಂಡಂತಿದೆ. |

| ನಗರ | ಒಟ್ಟು ಕಾಮಗಾರಿಗಳು | | ಪೂರ್ಣಗೊಂಡ ಕಾಮಗಾರಿಗಳು | | ಪ್ರಗತಿಯಲ್ಲಿರುವ ಕಾಮಗಾರಿಗಳು | | ಟೆಂಡರ್ ಹಂತದಲ್ಲಿರುವ ಕಾಮಗರಿಗಳು (ರೂ. ಕೋಟಿಗಳಲ್ಲಿ) | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಬೆಳಗಾವಿ | 108 | 1140.06 | 88 | 609.18 | 20 | 530.88 | 00 | 0.00 |
| ದಾವಣಗೆರೆ | 115 | 1006.93 | 93 | 669.43 | 22 | 337.5 | 00 | 0.00 |
| ಹುಬ್ಬಳ್ಳಿ-ಧಾರವಾಡ | 63 | 979.28 | 51 | 427.35 | 12 | 551.93 | 00 | 0.00 |
| ಮಂಗಳೂರು | 62 | 1401.81 | 35 | 360.65 | 26 | 841.16 | 1 | 200.00 |
| ಶಿವಮೊಗ್ಗ | 74 | 1151.83 | 61 | 812.92 | 12 | 198.81 | 1 | 140.1 |
| ತುಮಕೂರು | 185 | 1280.37 | 164 | 918.22 | 21 | 362.15 | 00 | 0.00 |
| ಬೆಂಗಳೂರು | 44 | 932.10 | 30 | 522.35 | 14 | 409.75 | 00 | 0.00 |
| ಒಟ್ಟು | 651 | 7892.38 | 522 | 4320.10 | 127 | 3232.18 | 2 | 340.10 |

- ಸ್ಮಾರ್ಟ್ ಸಿಟಿ ಯೋಜನೆಯನ್ನು ಕೇಂದ್ರ ಸರ್ಕಾರವು ಜೂನ್ 2023 ರೊಳಗೆ ಪೂರ್ಣಗೊಳಿಸಲು ಗಡುವು ನೀಡಿರುತ್ತದೆ. ಈ ಕಾಲಾವಧಿಯಲ್ಲಿ ಪ್ರಗತಿಯಲ್ಲಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುವಾಗುವಂತೆ ನಗರಗಳಿಗೆ ತಿಂಗಳವಾರು ಗುರಿಗಳನ್ನು ನಿಗಧಿಪಡಿಸಿದ್ದು, ಅದರಂತೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.
- ಆದಾಗ್ಯೂ, ರಾಜ್ಯದ 7 ನಗರಗಳಲ್ಲಿ 11 ಕಾಮಗಾರಿಗಳು (ದಾವಣಗೆರೆ-4 ಕಾಮಗಾರಿಗಳು, ಮಂಗಳೂರು-6 ಕಾಮಗಾರಿಗಳು ಹಾಗೂ ಹುಬ್ಬಳ್ಳಿ-ಧಾರವಾಡ-1 ಕಾಮಗಾರಿ) ನ್ಯಾಯಾಲದಲ್ಲಿನ ದಾವೆ, ಸಕ್ಷಮ ಪ್ರಾಧಿಕಾರಗಳು (CRZ ESCOMS etc.,) ಅನುಮೋದನೆ ನೀಡಲು ಆಗುತ್ತಿರುವ ವಿಳಂಬದಿಂದಾಗಿ ಜೂನ್ 2023 ರ ಒಳಗೆ ಪೂರ್ಣಗೊಳಿಸಲು ಕಷ್ಟಸಾಧ್ಯವಾಗಿದ್ದು, ಈ ಮೇಲಿನ 11 ಕಾಮಗಾರಿಗಳನ್ನು ಅಂತಿಮವಾಗಿ ಏಪ್ರಿಲ್ 2024 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಕುರಿತು ಕೇಂದ್ರ ಸರ್ಕಾರದ ಅನುಮೋದನೆ ಕೋರಿ ದಿನಾಂಕ:28.10.2022 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆ ನಿರೀಕ್ಷಿಸಿದೆ.

<table>
<tr>
<td>ಉ</td>
<td>ಸ್ಮಾರ್ಟ್ ಸಿಟಿ ಮಿಷನ್ ಯೋಜನೆಗೆ ಇದುವರೆಗೂ ಕೇಂದ್ರ ಸರ್ಕಾರ ನೀಡಿರುವ ಅನುದಾನವೆಷ್ಟು; ಮತ್ತು ರಾಜ್ಯ ಸರ್ಕಾರವು ತನ್ನ ಪಾಲಿನಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; ವಿವರಗಳು</td>
<td>ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ 7 ನಗರಗಳಿಗೆ ಕೇಂದ್ರ ಸರ್ಕಾರದಿಂದ ರೂ. 2949.21ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.2950.00 ಕೋಟಿಯಂತೆ ಒಟ್ಟಾರೆಯಾಗಿ ರೂ. 5899.91 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ನಗರವಾರು ಬಿಡುಗಡೆಗೊಳಿಸಿರುವ ಅನುದಾನ ಹಾಗೂ ಜನವರಿ 2023 ರ ಅಂತ್ಯಕ್ಕೆ ಆಗಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.
<table>
<tr><th>ನಗರ</th><th>ಕೇಂದ್ರ ಸರ್ಕಾರ</th><th>ರಾಜ್ಯ ಸರ್ಕಾರ</th><th>ಒಟ್ಟು</th><th>ವೆಚ್ಚ (31.01.2023 ರ ಅಂತ್ಯಕ್ಕೆ)</th></tr>
<tr><td>ಬೆಳಗಾವಿ</td><td>441.00</td><td>415.00</td><td>856.00</td><td>815.03</td></tr>
<tr><td>ದಾವಣಗೆರೆ</td><td>441.00</td><td>415.00</td><td>856.00</td><td>770.95</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>392.00</td><td>414.00</td><td>806.00</td><td>674.36</td></tr>
<tr><td>ಮಂಗಳೂರು</td><td>392.00</td><td>414.00</td><td>806.00</td><td>657.45</td></tr>
<tr><td>ಶಿವಮೊಗ್ಗ</td><td>452.91</td><td>464.00</td><td>916.91</td><td>836.20</td></tr>
<tr><td>ತುಮಕೂರು</td><td>441.00</td><td>414.00</td><td>855.00</td><td>815.23</td></tr>
<tr><td>ಬೆಂಗಳೂರು</td><td>390.00</td><td>414.00</td><td>804.00</td><td>730.66</td></tr>
<tr><td>ಒಟ್ಟು</td><td>2949.91</td><td>2950.00</td><td>5899.91</td><td>5299.88</td></tr>
</table>
</td>
</tr>
</table>